RNU AIR DHARWAD

# NOVEMBER 22, 2025

# AKASHAVANI - DHARWAD

# PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಕೊಪ್ಪಳ ಜಿಲ್ಲೆ, ತಳಕಲ್ಲಿನ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ, ರ್‍ಯಾಂಪ್ ಯೋಜನೆಯಡಿ, ನವೋದ್ಯಮ ಇನ್‌ಕ್ಯೂಬೇಷನ್ ಕೇಂದ್ರಗಳ ಕುರಿತು, ಕಾರ್ಯಾಗಾರ ನಡೆಯಿತು. ಪ್ರಾಂಶುಪಾಲ ವಿರುಪಾಕ್ಷಿ ಬಾಗೋಡಿ, ಕಾರ್ಯಾಗಾರಕ್ಕೆ ಚಾಲನೆ ನೀಡಿ, ರಾಜ್ಯದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಕೈಗಾರಿಕಾ ಕೇಂದ್ರ ಹಾಗೂ ಕೇಂದ್ರದ ಸಣ್ಣ, ಸೂಕ್ಷ್ಮ ಹಾಗೂ ಮಧ್ಯಮ ಕೈಗಾರಿಕೆ ಸಚಿವಾಲಯ, ಎಂ.ಎಸ್.ಎಂ.ಇ. ಮೂಲಕ, ನವೋದ್ಯಮಗಳನ್ನು ಆರಂಭಿಸಲು, ಸೂಕ್ತ ಮಾರ್ಗದರ್ಶನ ಹಾಗೂ ಸಹಾಯ ಧನವನ್ನು ಒದಗಿಸುತ್ತಿದೆ ಎಂದರು.

<><><>

ಗೃಹಲಕ್ಷ್ಮೀ ಯೋಜನೆಯ, 23ನೇ ಕಂತಿನ ಹಣ, ಮುಂಬರುವ ಒಂದು ವಾರದಲ್ಲಿ, ಫಲಾನುಭವಿಗಳ ಖಾತೆಗೆ ಜಮೆಯಾಗಲಿದೆ ಎಂದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಸಚಿವರಾದ, ಲಕ್ಷ್ಮೀ ಹೆಬ್ಬಾಳ್ಕರ, ಭರವಸೆ ನೀಡಿದ್ದಾರೆ. 28ನೇ ತಾರೀಖು ಬೆಂಗಳೂರಿನಲ್ಲಿ ಆಯೋಜಿತ, ರಾಜ್ಯ ಮಟ್ಟದ ಸಮಾವೇಶದಲ್ಲಿ, 'ಅಕ್ಕಾ ಪಡೆ' ಉದ್ಘಾಟನೆಯಾಗಲಿದೆ ಎಂದು, ಬೆಂಗಳೂರಿನಲ್ಲಿ ಪೂರ್ವಭಾವಿ ಸಭೆಯಲ್ಲಿ, ಅವರು ತಿಳಿಸಿದರು. ತುರ್ತು ಸಂದರ್ಭದಲ್ಲಿ, ಮಹಿಳೆಯರು ಕ್ಯೂ.ಆರ್. ಕೋಡ್ ಅಥವಾ ದೂರವಾಣಿ ಮೂಲಕ, ಅಕ್ಕಾ ಪಡೆಯನ್ನು ಸಂಪರ್ಕಿಸಿ, ಸಹಾಯ ಪಡೆಯಬಹುದು ಎಂದರು.

<><><>

ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಉದ್ಯೋಗಿನಿ, ಚೇತನ, ಧನಶ್ರೀ ಹಾಗೂ ಲಿಂಗತ್ವ ಅಲ್ಪಸಂಖ್ಯಾತರ, ಪುನರ್ವಸತಿ ಯೋಜನೆಗಳಡಿ, ಅರ್ಹರಿಂದ ಅರ್ಜಿ ಆಹ್ವಾನಿಸಿದೆ. ಗದಗ ಜಿಲ್ಲೆಯ ಅರ್ಹ ಫಲಾನುಭವಿಗಳು, ಗ್ರಾಮ ಒನ್, ಕರ್ನಾಟಕ ಒನ್ ಅಥವಾ ಬಾಪೂಜಿ ಸೇವಾ ಕೇಂದ್ರಗಳ ಮೂಲಕ, ಡಿಸೆಂಬರ್ 15ರ ಒಳಗಾಗಿ, ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸಬಹುದು.

<><><>

72 ನೇ ಅಖಿಲ ಭಾರತ ಸಹಕಾರ ಸಪ್ತಾಹದ ಹಿನ್ನಲೆ, ಹಾವೇರಿಯಲ್ಲಿ ಜರುಗಿದ ರಾಜ್ಯ ಮಟ್ಟದ ಕಾರ್ಯಕ್ರಮದಲ್ಲಿ, ಶಿಗ್ಗಾಂವಿಯ ಶ್ರೀ ಜಗದ್ಗುರು ರೇಣುಕಾಚಾರ್ಯ ಕೋ-ಆಪರೇಟಿವ್ ಸೊಸಾಯಿಟಿ ಲಿಮಿಟೆಡ್, 'ಉತ್ತಮ ಸಹಕಾರ ಸಂಘ' ಪ್ರಶಸ್ತಿಗೆ ಭಾಜನವಾಗಿದೆ. ಸಂಘದ ಅಧ್ಯಕ್ಷ ರುದ್ರಮುನಿ ಅರಳೆಲೆಮಠ, ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ರುದ್ರಮುನಿ ಅರಳೆಲೆಮಠ 31 ಸೆಕೆಂದುಗಳು

<><><>

ರಾಷ್ಟ್ರೀಯ ಆರೋಗ್ಯ ಮಿ ’ನ್ ಯೋಜನೆ ಅಡಿ, ಬೆಳಗಾವಿ ಜಿಲ್ಲೆ, ಹುಕ್ಕೇರಿ ತಾಲೂಕಿನ, ಸಂಕೇಶ್ವರ ಪಟ್ಟಣದಲ್ಲಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸ್ಥಾಪಿಸಿರುವ, ‘ನಮ್ಮ ಕ್ಲಿನಿಕ್’ಗೆ, ಚಿಕ್ಕೋಡಿ ಸಂಸದರಾದ, ಪ್ರಿಯಾಂಕಾ ಜಾರಕಿಹೊಳಿ, ಚಾಲನೆ ನೀಡಿದರು. ‘ನಮ್ಮ ಕ್ಲಿನಿಕ್’ ಮೂಲಕ, ಜನರಿಗೆ ಇನ್ನ ್ಟ ಸಮೀಪ, ಸುಲಭ ಮತ್ತು ಗುಣಮಟ್ಟದ ಆರೋಗ್ಯ ಸೇವೆಗಳು, ಲಭ್ಯವಾಗಲಿವೆ ಎಂದರು.

<><><>

ಮಲಪ್ರಭಾ ಯೋಜನಾ ವಲಯದ, ಬೆಳಗಾವಿ ಜಿಲ್ಲೆ, ಸವದತ್ತಿ ತಾಲೂಕಿನ, ನವಿಲುತೀರ್ಥದ, ರೇಣುಕಾ ಸಾಗರ ಜಲಾಶಯದಿಂದ, ಮಲಪ್ರಭಾ ಬಲದಂಡೆ ಕಾಲುವೆ, ನರಗುಂದ ಶಾಖಾ ಕಾಲುವೆ, ಕೊಳಚಿ ಬಲದಂಡೆ ಕಾಲುವೆ ಮತ್ತು ಏತ ನೀರಾವರಿ ಯೋಜನೆಗಳ ಮೂಲಕ, ಕೃಷಿ ಉದ್ದೇಶಕ್ಕಾಗಿ ಕಳೆದ 11ನೇ ತಾರೀಖಿನಿಂದ, ನೀರು ಹರಿಸಲಾಗುತ್ತಿದೆ. ಅಚ್ಚುಕಟ್ಟು ಪ್ರದೇಶದ ರೈತರು, ಲಘು ನೀರಾವರಿ ಬೆಳೆಗಳನ್ನು ಮಾತ್ರ ಬೆಳೆಯಲು, ನೀರಿನ ಬಳಕೆಯಲ್ಲಿ ಮಿತವ್ಯಯ ಸಾಧಿಸಲು ಹಾಗೂ ಕಾಲುವೆಗೆ ಇಳಿಯದಂತೆ, ಮಲಪ್ರಭಾ ಬಲದಂಡೆ ಕಾಲುವೆ ವೃತ್ತದ ಅಧೀಕ್ಷಕ ಅಭಿಯಂತರರು, ಕೋರಿದ್ದಾರೆ.

<><><>

ಕೊಡಗು ಜಿಲ್ಲೆಯ, ಅರಣ್ಯ ವ್ಯಾಪ್ತಿಯಲ್ಲಿ, ವಿದ್ಯುತ್ ಸಂಪರ್ಕ ಸೇರಿದಂತೆ, ವಿವಿಧ ಅಭಿವೃದ್ಧಿ ಯೋಜನೆಗಳಿಗೆ, ಸಚಿವ ಸಂಪುಟದಲ್ಲಿ ಅನುಮೋದನೆ ಪಡೆಯಲು, ವಿಸ್ತೃತ ವರದಿ ಸಲ್ಲಿಸುವಂತೆ, ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಬೋಸರಾಜು, ಅರಣ್ಯ ಇಲಾಖೆ ಅಧಿಕಾರಿಗಳಿಗೆ, ಸೂಚಿಸಿದ್ದಾರೆ. ಮಡಿಕೇರಿಯಲ್ಲಿ ಅಧಿಕಾರಿಗಳ ಸಭೆ ನಡೆಸಿದ ಸಚಿವರು, ಅರಣ್ಯ ಸಂಪತ್ತಿನ ಸಂರಕ್ಷಣೆ ಜೊತೆಗೆ, ಪರಿಸರ ಸ್ನೇಹಿ ಅಭಿವೃದ್ಧಿ ಯೋಜನೆಗಳ ಮೂಲಕ, ಜನರಿಗೂ ಅನುಕೂಲ ಕಲ್ಪಿಸುವುದು, ಸರ್ಕಾರದ ಆದ್ಯತೆ ಎಂದರು.

<><><>

ಪೌರ ಕಾರ್ಮಿಕರಿಗೆ, ನಿಯಮಿತ ಆರೋಗ್ಯ ತಪಾಸಣೆ, ಭವಿ ್ಯ ನಿಧಿ ಹಾಗೂ ಇ.ಎಸ್.ಐ. ಪ್ರಾವಧಾನ ಲಭ್ಯತೆಯ, ಭತ್ಯೆ ಕಡಿತಗಳನ್ನು, ಪರಿಶೀಲಿಸುವಂತೆ, ಗದಗ ಜಿಲ್ಲಾಧಿಕಾರಿ ಸಿ.ಎನ್ ಶ್ರೀಧರ, ಅಧಿಕಾರಿಗಳಿಗೆ ಸೂಚಿಸಿದ್ದಾರೆ. ತಮ್ಮ ಕಚೇರಿ ಸಭಾಂಗಣದಲ್ಲಿ, ಸಫಾಯಿ ಕರ್ಮಚಾರಿ ಸೌಲಭ್ಯಗಳ ಕುರಿತ, ಸಭೆಯ ಅಧ್ಯಕ್ಷತೆ ವಹಿಸಿ, ಮಾತನಾಡಿದರು.

<><><>

ಉಡುಪಿ ಜಿಲ್ಲೆಯ, ಸಖಿ ಒನ್ ಸ್ಟಾಪ್ ಕೇಂದ್ರದಲ್ಲಿ, ಅಕ್ಟೋಬರ್ ತಿಂಗಳಾಂತ್ಯದ ವರೆಗೆ, 180 ಕೌಟುಂಬಿಕ ದೌರ್ಜನ್ಯ ಪ್ರಕರಣಗಳು ದಾಖಲಾಗಿವೆ ಎಂದು, ಜಿಲ್ಲಾಧಿಕಾರಿ ಟಿ.ಕೆ. ಸ್ವರೂಪಾ ತಿಳಿಸಿದ್ದಾರೆ. ಆ ಪೈಕಿ, 121 ಪ್ರಕರಣಗಳು ಇತ್ಯರ್ಥವಾಗಿವೆ. 20 ಪ್ರಕರಣಗಳು ವಿಚಾರಣಾ ಹಂತದಲ್ಲಿದ್ದು, 22 ಪ್ರಕರಣಗಳು ಆಪ್ತ ಸಮಾಲೋಚನೆಯ ಹಂತದಲ್ಲಿವೆ; ಕುಂದಾಪುರದ ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರದಲ್ಲಿ, ದಾಖಲಾಗಿದ್ದ 107 ಪ್ರಕರಣಗಳ ಪೈಕಿ, 94 ಇತ್ಯರ್ಥವಾಗಿವೆ, ಎಂದರು.

<><><>

ಧಾರವಾಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ, ನಾಳೆ ಬೆಳಗ್ಗೆ 11 ಗಂಟೆಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮುಖಂಡರುಗಳ ಕುಂದುಕೊರತೆಗಳ ಸಭೆಯನ್ನು ಆಯೋಜಿಸಲಾಗಿದೆ ಎಂದು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗುಂಜನ್ ಆರ್ಯ ತಿಳಿಸಿದ್ದಾರೆ.

<><><>

ಹುಬ್ಬಳ್ಳಿ–ಧಾರವಾಡ ನಗರದಲ್ಲಿ, ಪೊಲೀಸ್ ಆಯುಕ್ತರ ಕಚೇರಿಯಿಂದ, ವಿಶೇ ’ ಕಾರ್ಯಾಚರಣೆ ಕೈಗೊಂಡು, 129 ಜನ ಮಾದಕ ವಸ್ತು ವ್ಯಸನಿಗಳನ್ನು, ಗುರುತಿಸಿ, 24 ಪ್ರಕರಣಗಳನ್ನು ದಾಖಲಿಸಲಾಗಿದೆ. ಹುಬ್ಬಳ್ಳಿಯ ಶ್ರೀ ರಂಭಾಪುರಿ ಕಲ್ಯಾಣ ಮಂಟಪದಲ್ಲಿ, ತಜ್ಞರಿಂದ ಆಪ್ತ ಸಮಾಲೋಚನೆ, ಪೋ ’ಕರು ಮಕ್ಕಳ ಬಗ್ಗೆ ವಹಿಸಬೇಕಾದ, ಕಾಳಜಿಯ ಬಗ್ಗೆ ಮಾರ್ಗದರ್ಶನ ಮಾಡಲಾಗಿದೆ. ಒಟ್ಟು 6 ವಿಶೇ ’ ಕಾರ್ಯಾಚರಣೆ ನಡೆಸಿ, ಸಾವಿರದ 270 ಮಾದಕ ವಸ್ತು ಬಳಕೆದಾರರನ್ನು ಪತ್ತೆ ಹಚ್ಚಿ, 245 ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು, ಪ್ರಕಟಣೆ ತಿಳಿಸಿದೆ.

<><><>

ದೇಶಾದ್ಯಂತ 26ನೇ ತಾರೀಖು, ಬುಧವಾರ, ಸಂವಿಧಾನ ದಿನಾಚರಣೆ. ಬೆಂಗಳೂರಿನ, ವಸಂತ ನಗರದ ಬಿ.ಆರ್ ಅಂಬೇಡ್ಕರ್ ಭವನದಲ್ಲಿ ಅಂದು ಆಯೋಜಿತ, ಪ್ರಧಾನ ಕಾರ್ಯಕ್ರಮದಲ್ಲಿ, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಹಾಗೂ ಸಮಾಜ ಕಲ್ಯಾಣ ಖಾತೆ ಸಚಿವರು ಸೇರಿದಂತೆ, ಗಣ್ಯರು ಪಾಲ್ಗೊಳ್ಳಲಿದ್ದಾರೆ.

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ತಾಲೂಕು ಪಂಚಾಯಿತಿ ಸಭಾ ಭವನದಲ್ಲಿ, ಬರುವ ಬುಧವಾರ, ಮಧ್ಯಾಹ್ನ 12 ಗಂಟೆಗೆ, ಸಂವಿಧಾನ ದಿನಾಚರಣೆ ನಡೆಯಲಿದೆ ಎಂದು, ಸಮಾಜ ಕಲ್ಯಾಣ ಇಲಾಖೆಯ, ಸಹಾಯಕ ನಿರ್ದೇಶಕಿ ಪ್ರಿಯದರ್ಶಿನಿ ಹಿರೇಮಠ ತಿಳಿಸಿದ್ದಾರೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.